KACB600001292017

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶಿಡ್ಲಘಟ್ಟ

ಇಂದು ದಿನಾಂಕಃ 30 ನೇ ತಾರೀಖು ಜುಲೈ, 2026

-ಉಪಸ್ಥಿತರು-

ಶ್ರೀಮತಿ. ಸುಕನ್ಯ ಸಿ.ಎಸ್ , ಬಿ .ಎ. ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಶಿಡ್ಲಘಟ್ಟ.

ಸಿ.ಸಿ. ಸಂಖ್ಯೆಃ 37/2017

ಫಿರ್ಯಾದಿದಾರರು : ಸರ್ಕಾರದ ಪರವಾಗಿ ಆರಕ್ಷಕ ಉಪನೀರೀಕ್ಷಕರು,
ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣೆ.

(ಪ್ರತಿನಿಧಿಸುವವರು -ಸಹಾಯಾಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತರು : ನಾರಾಯಣಸ್ವಾಮಿ
ಬಿನ್ ಲೇಟ್ ಕೃಷ್ಣಪ್ಪ,
ಸುಮಾರು 36 ವರ್ಷ ವಯಸ್ಸು,
ವಾಸಃ ಜಪ್ತಿಹೊಸಹಳ್ಳಿ ಗ್ರಾಮ,
ಶಿಡ್ಲಘಟ್ಟ ತಾಲ್ಲೂಕು.
ಚಿಕ್ಕಬಳ್ಳಾಪುರ ಜಿಲ್ಲೆ.

(ಪ್ರತಿನಿಧಿಸಿದವರು ಶ್ರೀ.ಎಂ.ಪಾಪಿರೆಡ್ಡಿ -ವಕೀಲರು)

ಘಟನೆಯ ವಿವರಗಳುಃ

1. ಆಪಾದನೆ ದಿನಾಂಕ - 14/15-03-2016
2. ಆಪಾದನೆ ವರದಿಯಾದ ದಿನಾಂಕ - 15.03.20165
3. ಫಿರ್ಯಾದುದಾರರ ಹೆಸರು - ಮುನಿರಾಜಪ್ಪ
4. ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ - 18.09.2019

5. ಸಾಕ್ಷಿದಾರರ ವಿಚಾರಣೆ ಮುಕ್ತಾಯವಾದ ದಿನಾಂಕ - 07.03.2025

6. ಅಪಾದಿಸಲ್ಪಟ್ಟ ಅಪಾದನೆಗಳು - ಭಾರತೀಯ ದಂಡ ಸಂಹಿತೆ ಕಲಂ. 324, 326, 504 ರಂತೆ.

7. ನ್ಯಾಯಾಧೀಶರ ಅಭಿಪ್ರಾಯ - ಆರೋಪಿ ನಿರ್ದೋಷಿ.

ತೀರ್ಪು

ಶಿಡ್ಲಘಟ್ಟ ಗ್ರಾಮಾಂತರ ಠಾಣಾ ಪೋಲೀಸರು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 324, 326, 504 ರಡಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುವುದಾಗಿ ಆರೋಪಿಸಿ, ನ್ಯಾಯಾಲಯಕ್ಕೆ ಈ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

2. ದೋಷಾರೋಪಣ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತದೆ.

ದಿನಾಂಕಃ 14.03.2016 ರಂದು ಮಧ್ಯರಾತ್ರಿ ಅಂದರೆ 15.03.2016 ರಂದು ಸುಮಾರು 12.30 ಗಂಟೆ ಸಮಯದಲ್ಲಿ ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಜಪ್ತಿಹೊಸಹಳ್ಳಿ ಗ್ರಾಮದಲ್ಲಿ ಚಾಸಾ.1 ರವರು ಅವರಿಗೆ ಸೇರಿದ ಹಸುಗಳ ಮನೆಯಲ್ಲಿ ಮಲಗಿದ್ದಾಗ ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಆರೋಪಿಯು ಅಲ್ಲಿಗೆ ಬಂದು ಚಾಸಾ.1 ರವರನ್ನು ಕುರಿತು "ನನ್ನ ಮಗನೆ ನನ್ನ ಮೇಲೆ ಇಲ್ಲ-ಸಲ್ಲದ ಮಾತುಗಳು ಹೇಳಿಕೊಂಡು ಮಾನ ಮರ್ಯಾದೆ ತೆಗೆಯುತ್ತೀಯಾ" ಎಂದು ಅವಾಚ್ಯ ಶಬ್ದಗಳಿಂದ ಬೈದು, ದೊಣ್ಣೆಯಿಂದ ಚಾಸಾ.1 ರವರ ಬಲಗಾಲಿಗೆ ಬಲವಾಗಿ ಹೊಡೆದು ತೀವ್ರಸ್ವರೂಪದ ಗಾಯವನ್ನುಂಟುಮಾಡಿ, ಅದೇ ದೊಣ್ಣೆಯಿಂದ ಅವರ ಎಡಮುಂಗೈಗೆ ಹೊಡೆದು ಸಾಧಾರಣ ಸ್ವರೂಪದ ಗಾಯವನ್ನುಟಂಮಾಡಿರುತ್ತಾರೆ ಎಂಬುದು ಅಭಿಯೋಜನೆಯ ಪ್ರಕರಣವಾಗಿದೆ.

3. ಈ ಪ್ರಕರಣದ ಪ್ರಥಮ ಮಾಹಿತಿದಾರರಾದ ಮುನಿರಾಜಪ್ಪ ರವರು ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣಾ ಸರಹದ್ದು, ಜಪ್ತಿಹೊಸಹಳ್ಳಿ ಗ್ರಾಮದ ತಮ್ಮ ವಾಸದ ಮನೆಯ ಮುಂದೆ ಒಬ್ಬರೇ ದಿನಾಂಕಃ 14/15.03.2016 ರಂದು ರಾತ್ರಿ 12.30 ಗಂಟೆ ಸಮಯದಲ್ಲಿ ಮಲಗಿದ್ದಾಗ ನಾಯಿಗಳು ಬೊಗಳುವ ಶಬ್ದ ಕೇಳಿ ಎಚ್ಚರಗೊಂಡಾಗ ಯಾರು ಮೂರು ಜನ ಅಪರಿಚಿತರು ಬಂದು ಕೈಗಳಿಂದ ದೊಣ್ಣೆಗಳಿಂದ ಏಕಾಏಕಿ ತಮ್ಮ ಬಲಗಾಲಿಗೆ ಮತ್ತು ಎಡಮೊಣಕೈಗೆ ಹೊಡದು ತೀವ್ರವಾದ ಗಾಯಗಳನ್ನುಂಟುಮಾಡಿ, ರಕ್ತಬಂದಿರುತ್ತದೆ ಎಂದು ಆಗ ಆರೋಪಿಯು ಸ್ವಲ್ಪ ಆಚೆ ದೂರ ನಿಂತಿದ್ದು, ಸಾಕು ಬನ್ನಿ ಎಂದು ಕೂಗಿದಾಗ ಮೂರು ಜನ ಅಪರಿಚಿತರು ಓಡಿಹೋದರೆಂದು ದಿನಾಂಕಃ 15.03.2016 ರಂದು ಬೆಳಗಿನ ಜಾವ 2.00 ಗಂಟೆಗೆ ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆಯ ಆಧಾರದ ಮೇಲೆ ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣಾ ಆರಕ್ಷಕ ಉಪ-ನಿರೀಕ್ಷಕರಾಗಿದ್ದ ಪ್ರದೀಪ್ ಪೂಜಾರಿ.ಎ. ರವರು ತನಿಖೆ ಪೂರ್ಣಗೊಳಿಸಿ, ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 324, 326, 504 ರಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ.

4. ಆರೋಪಿಯು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದು, ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ನ್ಯಾಯಾಲಯವು ಭಾರತೀಯ ದಂಡ ಸಂಹಿತೆ ಕಲಂ. 324, 326, 504 ರ ಆರೋಪಗಳಿಗೆ ಸಂಜ್ಞೆತೆಯನ್ನು ತೆಗೆದುಕೊಂಡಿದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿ ದೋಷಾರೋಪಣಾ ಪಟ್ಟಿಯ ನಕಲನ್ನು ಆರೋಪಿಗೆ ಜಾರಿಗೊಳಿಸಿದೆ. ದೋಷಾರೋಪಣೆ ರಚಿಸುವ ಪೂರ್ವದಲ್ಲಿ ವಾದವನ್ನು

ಆಲಿಸಲಾಯಿತು. ಆದರೆ ಆರೋಪಿ ವಿರುದ್ಧ ದೋಷಾರೋಪಣೆ ರಚಿಸುವ ಪೂರ್ವದಲ್ಲಿ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ನ್ಯಾಯಾಲಯಕ್ಕೆ ಕಂಡು ಬರದ ಕಾರಣ ಆರೋಪಿ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ. 324, 326, 504 ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ, ಓದಿ, ಆರೋಪಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಹೇಳಿದ್ದು, ಆರೋಪಿ ತಾವು ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

5. ಅಭಿಯೋಜನೆಯು ಆರೋಪಿ ವಿರುದ್ದ ಮಾಡಿರುವ ಆರೋಪಗಳನ್ನು ಸಂದೇಹಾತೀತವಾಗಿ ರುಜುವಾತು ಪಡಿಸಲು ತಮ್ಮ ಪರವಾಗಿ ಫ್ರಾಸಾ-1 ರಿಂದ ಫ್ರಾಸಾ.7 ರವರನ್ನು ವಿಚಾರಣೆಗೆ ಗುರಿಪಡಿಸಿ, ನಿಪಿ-1 ರಿಂದ 5 ರ ದಾಖಲೆಗಳನ್ನು ಹಾಗೂ ಮು.ಮಾ-1 ರಿಂದ 4 ನ್ನು ಗುರುತಿಸಿಕೊಂಡಿದೆ. ಆರೋಪಿ ಪರ ವಕೀಲರು ಫ್ರಾಸಾ.1 ರವರನ್ನು ಪಾಟಿಸವಾಲಿಗೊಳಪಡಿಸಿ, ಪಾಟಿಸವಾಲಿನಲ್ಲಿ ತಮ್ಮ ಪರವಾಗಿ 4 ಛಾಯಾಚಿತ್ರಗಳನ್ನು ನಿಡಿ.1 ರಿಂದ ನಿಡಿ.4 ರಂತೆ ಗುರ್ತಿಸಿಕೊಂಡಿರುತ್ತಾರೆ.

6. ಅಭಿಯೋಜನೆಯ ಪರ ಸಾಕ್ಷಿಗಳ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿ ಹೇಳಿಕೆಯನ್ನು ದಾಖಲು ಮಾಡಿದ್ದು, ಆರೋಪಿ ತಮ್ಮ ವಿರುಧ್ಧ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ತಮ್ಮ ಪರ ಸಾಕ್ಷ್ಯ ವಿಚಾರಣೆ ಇಲ್ಲವೆಂದು ನುಡಿದಿದ್ದರಿಂದ ಪ್ರಕರಣವನ್ನು ವಾದ ಮಂಡನೆಗೆ ಮುಂದೂಡಲಾಯಿತು.

7. ಅಭಿಯೋಜನಾ ಪರ ಮಾನ್ಯ ಸಹಾಯಕ ಸರ್ಕಾರಿ ವಕೀಲರ ಮತ್ತು ನುರಿತ ಆರೋಪಿ ಪರ ವಕೀಲರ ವಾದವನ್ನು ಆಲಿಸಲಾಯಿತು.

ನ್ಯಾಯಾಲಯದ ಮುಂದೆ ಲಭ್ಯವಿರುವ ದಾಖಾಲಾತಿಗಳ ಆಧಾರದ ಮೇಲೆ ಈ ನ್ಯಾಯಾಲಯದ ತೀರ್ಮಾನಕ್ಕೆ ಕೆಳಕಂಡ ಅಂಶ ಉದ್ಭವಿಸಿದೆ.

ಅಂಶಗಳು

1. ದಿನಾಂಕಃ 14.03.2016 ರಂದು ಮಧ್ಯರಾತ್ರಿ ಅಂದರೆ 15.03.2016 ರಂದು ಸುಮಾರು 12.30 ಗಂಟೆ ಸಮಯದಲ್ಲಿ ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಜಪ್ತಿಹೊಸಹಳ್ಳಿ ಗ್ರಾಮದಲ್ಲಿ ಚಾಸಾ.1 ರವರು ಅವರಿಗೆ ಸೇರಿದ ಹಸುಗಳ ಮನೆಯಲ್ಲಿ ಮಲಗಿದ್ದಾಗ ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಆರೋಪಿಯು ಅಲ್ಲಿಗೆ ಬಂದು ಚಾಸಾ.1 ರವರನ್ನು ಕುರಿತು "ನನ್ನ ಮಗನೆ ನನ್ನ ಮೇಲೆ ಇಲ್ಲ-ಸಲ್ಲದ ಮಾತುಗಳು ಹೇಳಿಕೊಂಡು ಮಾನ ಮರ್ಯಾದೆ ತೆಗೆಯುತ್ತೀಯಾ" ಎಂದು ಅವಾಚ್ಯ ಶಬ್ದಗಳಿಂದ ಬೈದು, ಅವಮಾನಪಡಿಸುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ರ ಮೇರೆಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ದೊಣ್ಣೆಯಿಂದ ಚಾಸಾ.1 ರವರ ಬಲಗಾಲಿಗೆ ಬಲವಾಗಿ ಹೊಡೆದು ತೀವ್ರಸ್ವರೂಪದ ಗಾಯವನ್ನುಂಟುಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.326 ರ ಮೇರೆಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

3. ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ದೊಣ್ಣೆಯಿಂದ ಚಾಸಾ.1 ರವರ ಎಡಮುಂಗೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟುಮಾಡುವ

ಮೂಲಕ ಭಾರತೀಯ ದಂಡ ಸಂಹಿತೆ ಕಲಂ.324 ರ ಮೇರೆಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

4. ಆದೇಶ ಏನು?

8. ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯದಾರಗಳಿಂದ ಮೇಲ್ಕಂಡ ಅಂಶಕ್ಕೆ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ-1 ರಿಂದ 3: ನಕಾರಾತ್ಮಕವಾಗಿ

ಅಂಶ-4 : ಈ ಕೆಳಕಂಡ ಕಾರಣಗಳಿಂದ ಅಂತಿಮ ಆದೇಶದಂತೆ

ಕಾರಣಗಳು

9. ಅಂಶ-1 ರಿಂದ 3 -ಮೇಲ್ಕಂಡ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ, ಸಾಕ್ಷ್ಯದ ಪುನರಾವರ್ತನೆಯನ್ನು ತಪ್ಪಿಸಲು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ದಿನಾಂಕಃ 14.03.2016 ರಂದು ಮಧ್ಯರಾತ್ರಿ ಅಂದರೆ ದಿನಾಂಕಃ 15.03.2016 ರ ಬೆಳಿಗಿನ ಜಾವ 00.30 ಗಂಟೆಯಲ್ಲಿ ಚಾಸಾ.1 ರವರು ತಮ್ಮ ಬಾಬ್ತು ಹಸುಗಳ ಮನೆಯ ಮುಂಭಾಗದಲ್ಲಿ ಮಲಗಿದ್ದಾಗ ನಾಯಿಗಳು ಬೊಗಳುವ ಶಬ್ದ ಕೇಳಿ ಎಚ್ಚರಗೊಂಡಾಗ ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಆರೋಪಿಯು ಏಕಾಏಕಿ ಬಂದು ಚಾಸಾ.1 ರವರನ್ನು ಕುರಿತು "ನನ್ನ ಮಗನೆ ನನ್ನ ಮೇಲೆ ಇಲ್ಲ-ಸಲ್ಲದ ಮಾತುಗಳು ಹೇಳಿಕೊಂಡು ಮಾನ ಮರ್ಯಾದೆ ತೆಗೆಯುತ್ತೀಯಾ" ಎಂದು ಕೆಟ್ಟ ಮಾತುಗಳಿಂದ ಬೈದು, ಆರೋಪಿಯ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ.1 ರವರ ಬಲಗಾಲಿಗೆ ಬಲವಾಗಿ ಹೊಡೆದು ತೀವ್ರಸ್ವರೂಪದ ಗಾಯವನ್ನುಂಟುಮಾಡಿ, ಅದೇ ದೊಣ್ಣೆಯಿಂದ ಎಡಮುಂಗೈಗೆ ಹೊಡೆದು

ನೋವುಂಟುಮಾಡಿ, ಸಾಧಾರಣ ಸ್ವರೂಪದ ಗಾಯವನ್ನುಟಂಮಾಡಿರುತ್ತಾರೆಂಬುದು ಅಭಿಯೋಜನೆಯ ಪ್ರಕರಣವಾಗಿದೆ.

10. ಅಭಿಯೋಜನೆಯು ಆರೋಪಿ ವಿರುದ್ದ ಮಾಡಿರುವ ಆರೋಪಗಳನ್ನು ಯಾವುದೇ ಸಂಶಯಕ್ಕೆ ಎಡೆಮಾಡಿಕೊಡದೆ ಸಾಕಷ್ಟು ಸಾಕ್ಷ್ಯಾಧಾರಗಳ ಮೂಲಕ ರುಜುವಾತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯ ಮೇಲಿರುತ್ತದೆ. ಅಭಿಯೋಜನೆಯ ಪ್ರಕರಣದ ಸತ್ಯಾ-ಸತ್ಯೆತೆಗಳನ್ನು ಮತ್ತು ಆರೋಪಿ ವಿರುಧ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯು ಪ್ರಥಮ ಮಾಹಿತಿ ದಾಖಲಿಸಿದವರು ಮತ್ತು ಗಾಯಾಳು ಸಾಕ್ಷಿದಾರರಾದ ಚಾಸಾ.1 ರವರನ್ನು ಫ್ರಾಸಾ-1 ಎಂದು ವಿಚಾರಣೆಗೆ ಗುರಿಪಡಿಸಿದ್ದು, ಇವರು ಅಭಿಯೋಜನಾ ಪ್ರಕರಣವನ್ನು ಬೆಂಬಲಿಸಿ, ಸಾಕ್ಷ್ಯ ನುಡಿದಿದ್ದಾರೆ. ಚಾಸಾ.2 ರವರು ಚಾಸಾ.1 ರವರ ಪತ್ನಿಯಾಗಿದ್ದು, ಇವರು ಸಹ ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿ, ಘಟನೆಯ ಬಗ್ಗೆ ಸಾಕ್ಷ್ಯ ನುಡಿದಿದ್ದಾರೆ. ಚಾಸಾ.3 ರವರು ಚಾಸಾ.1 ರವರ ಭಾವನಾಗಿದ್ದು, ಇವರು ನಿಪಿ.2 ಸ್ಥಳ ಪಂಚನಾಮೆಯನ್ನು ಬೆಂಬಲಿಸಿ ಸಾಕ್ಷ್ಯ ನುಡಿದಿದ್ದಾರೆ. ಚಾಸಾ.4 ರವರು ಅಭಿಯೋಜನಾ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಅಭಿಯೋಜನೆಯವರ ಕೋರಿಕೆ ಮೇರೆಗೆ ಇವರ ಸಾಕ್ಷವನ್ನು ಕೈಬಿಡಲಾಗಿದೆ. ಚಾಸಾ.5 ರಿಂದ 7 ರವರು ಅಭಿಯೋಜನಾ ಪ್ರಕರಣದ ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರನ್ನು ಅಭಿಯೋಜನೆಯು ಫ್ರಾಸಾ.4 ರಿಂದ 6 ಎಂದು ವಿಚಾರಣೆಗೆ ಗುರಿಪಡಿಸಿದ್ದು, ಇವರು ಅಭಿಯೋಜನಾ ಪ್ರಕರಣವನ್ನು ಅಂದರೆ ಸ್ಥಳ ಪಂಚನಾಮೆಯನ್ನು ಬೆಂಬಲಿಸಿ ಸಾಕ್ಷ್ಯ ನುಡಿದಿರುವುದಿಲ್ಲ. ಚಾಸಾ.8 ರವರು ವೈಧ್ಯರಾಗಿದ್ದು,

ಅಭಿಯೋಜನಾ ಪ್ರಕಾರ ಇವರು ಚಾಸಾ.1 ರವರಿಗೆ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರು ಆಸ್ಪತ್ರೆಗೆ ಕಳುಹಿಸಿರುವುದಾಗಿ ನುಡಿದಿರುತ್ತಾರೆ. ಆದರೆ ಚಾಸಾ.8 ರವರನ್ನು ಕಣ್ತಪ್ಪಿನಿಂದ ದೋಷಾರೋಪಣಾ ಪಟ್ಟಿಯಲ್ಲಿ ಸಾಕ್ಷಿಯಾಗಿ ಸೇರಿಸಲಾಗಿದ್ದು, ಅವರ ಸಾಕ್ಷ್ಯವನ್ನು ಕೈಬಿಡಬೇಕೆಂದು ಅಭಿಯೋಜನೆಯವರ ಕೋರಿಕೆ ಮೇರೆಗೆ ಅವರ ಸಾಕ್ಷವನ್ನು ಕೈಬಿಡಲಾಗಿದೆ. ಚಾಸಾ.9 ರವರು ಚಾಸಾ.1 ರವರಿಗೆ ಚಿಕಿತ್ಸೆ ನೀಡಿದ ವೈದ್ಯರಾಗಿದ್ದು, ಇವರಿಗೆ ನ್ಯಾಯಾಲಯದಿಂದ ಸಾಕಷ್ಟು ಸಮನ್ಸ್ ಹೊರಡಿಸಿದರೂ ಅಭಿಯೋಜನೆಯು ಇವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಸಾಕ್ಷ್ಯ ನುಡಿಸುವಲ್ಲಿ ವಿಫಲವಾಗಿದೆ. ಮತ್ತೊಮ್ಮೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ.311 ರಡಿಯಲ್ಲಿ ಚಾಸಾ.9 ರವರಿಗೆ ಸಮನ್ಸ್ ಹೊರಡಿಸಬೇಕೆಂದು ಕೋರಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ, ಚಾಸಾ.9 ರವರಿಗೆ ಸಮನ್ಸ್ ಹೊರಡಿಸಿದರೂ ಸಹ ಚಾಸಾ.9 ರವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಸಾಕ್ಷ್ಯ ನುಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದ್ದು, ಅವರ ಸಾಕ್ಷ್ಯವನ್ನು ಕೈಬಿಡಲಾಗಿದೆ. ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ ತನಿಖಾಧಿಕಾರಿಗಳಾದ ಚಾಸಾ.10 ರವರನ್ನು ಅಭಿಯೋಜನೆಯು ಫ್ರಾಸಾ.7 ಎಂದು ವಿಚಾರಣೆಗೆ ಗುರಿಪಡಿಸಿದೆ. ಚಾಸಾ.1, ಚಾಸಾ.3, ಚಾಸಾ.4 ರಿಂದ 6 ಮತ್ತು 7 ರವರ ಸಾಕ್ಷ್ಯದಲ್ಲಿ ಅಭಿಯೋಜನೆಯು ನಿಪಿ.1 ರಿಂದ 5 ದಾಖಲೆಗಳನ್ನು ಮತ್ತು ನಿಪಿ.1(ಎ), ನಿಪಿ.1(ಬಿ) ನಿಪಿ.2(ಎ) ರಿಂದ ನಿಪಿ.2(ಈ), ನಿಪಿ.3(ಎ), ನಿಪಿ.5(ಎ) ಮತ್ತು ಮು.ಮಾ-1 ರಿಂದ 4 ನ್ನು ಗುರ್ತಿಸಿಕೊಂಡಿರುತ್ತಾರೆ. ನಿಪಿ.1 ಪ್ರಥಮ ವರ್ತಮಾನ ಹೇಳಿಕೆಯಾಗಿರುತ್ತದೆ. ನಿಪಿ.2 ಸ್ಥಳ ಪಂಚನಾಮೆಯಾಗಿರುತ್ತದೆ. ನಿಪಿ.3 ಪ್ರಥಮ

ವರ್ತಮಾನ ವರದಿಯಾಗಿರುತ್ತದೆ. ನಿಪಿ.4 ಸ್ವತ್ತಿನ ಪಟ್ಟಿಯಾಗಿರುತ್ತದೆ. ನಿಪಿ.5 ಚಾಸಾ.1 ರವರ ಗಾಯದ ಪ್ರಮಾಣ ಪತ್ರವಾಗಿರುತ್ತದೆ. ಮು.ಮಾ-1 ರಿಂದ 3 , ಮೂರು ನೀಲಗಿರಿ ದೊಣ್ಣೆಗಳಾಗಿರುತ್ತವೆ. ಮು.ಮಾ-4 ಒಂದು ಪಾಲಿಸ್ಟರ್ ಬಟ್ಟೆಯಾಗಿರುತ್ತದೆ. ಆರೋಪಿ ಪರ ವಕೀಲರು ತಮ್ಮ ಪಾಟಿಸವಾಲಿನಲ್ಲಿ ಫ್ರಾಸಾ.1 ರವರ ಪಾಟಿಸವಾಲಿನಲ್ಲಿ ಕಡತದಲ್ಲಿ ಲಭ್ಯವಿದ್ದ 4 ಭಾವಚಿತ್ರಗಳನ್ನು ನಿಡಿ.1 ರಿಂದ 4 ಎಂದು ಗುರ್ತಿಸಿಕೊಂಡಿದ್ದಾರೆ.

11. ಫ್ರಾಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ತಮ್ಮ ಮೆಲೀಂದ ಮೇಲೆ ಸಣ್ಣ ಸಣ್ಣ ಗಲಾಟೆ ಮಾಡುತ್ತಿದ್ದರು. ದಿನಾಂಕಃ14.03.2016 ರಯಿ ತಮ್ಮ ಮನೆಯ ಮುಂದೆ ಶೆಡ್ ನಲ್ಲಿ ಮಲಗಿದ್ದಾಗ ಸುಮಾರು 12.30 ಗಂಟೆ ಸಮಯದಲ್ಲಿ ನಾಯಿಗಳು ಬೊಗಳುವ ಶಬ್ದ ಕೇಳಿಸಿ, ತಮಗೆ ಎಚ್ಚರವಾಗಿದ್ದು, ಆಗ ಆರೋಪಿ ಮತ್ತು ಇತರೆ ಮೂರು ಜನ ವ್ಯಕ್ತಿಗಳು ತಮಗೆ ದೊಣ್ಣೆಯಿಂದ ಎಡಮೊಣಕೈ ಮೇಲೆ, ಬಲಕಾಲಿನ ಮೇಲೆ ಹೊಡೆದಿದ್ದರಿಂದ ತಮ್ಮ ಬಲಕಾಲು ಮೂಳೆ ಮುರಿತವಾಗಿತ್ತು ಮತ್ತು ಎಡಕೈ ಮೂಳೆ ಮುರಿದಿತ್ತು. ತಾವು ಕಿರುಚಿಕೊಂಡಾಗ ಚಾಸಾ.2 ಮತ್ತು 3 ರವರು ಸ್ಥಳಕ್ಕೆ ಬಂದು ತಮ್ಮನ್ನು ಆಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಆಸ್ಪತ್ರೆಯಲ್ಲಿ ಪೋಲೀಸರಿಗೆ ನಿಪಿ.1 ರಂತೆ ಹೇಳಿಕೆಯನ್ನು ನೀಡಿರುವುದಾಗಿ ಮತ್ತು ಆರೋಪಿಯನ್ನು ಗುರ್ತಿಸಿ, ಸಾಕ್ಷ್ಯ ನುಡಿದಿದ್ದಾರೆ.

12. ಆರೋಪಿ ಪರ ವಕೀಲರು ಫ್ರಾಸಾ.1 ರವರನ್ನು ಪಾಟಿಸವಾಲು ಮಾಡಿದಾಗ, ಆ ದಿನ ರಾತ್ರಿ ಶೆಡ್ ಹಿಂಭಾಗದಿಂದ ಒಬ್ಬರು ಮತ್ತು ಮುಂಭಾಗದಿಂದ ಮೂರು ಜನ ಬಂದರು. ಆ ಸಮಯದಲ್ಲಿ ಆರೋಪಿಯು

ಸಾಕು ಬಿಡಿ ಎಂದು ಕರಿಬೇವಿನ ಗಿಡದ ಕೆಳಗೆ ನಿಂತು ಹೇಳುತ್ತಿದ್ದರು. ಉಳಿದ ಮೂರು ಜನ ದೊಣ್ಣೆಯಿಂದ ಹೊಡೆದು ಮತ್ತು ಚಾಕುವಿನಿಂದ ತಮ್ಮ ಬಲಗಾಲಿಗೆ ಹೊಡೆದರು. ನನ್ನ ಹೆಂಡತಿ ಅಂದರೆ ಚಾಸಾ.2 ರವರು ಶೆಡ್ ನಲ್ಲಿ ಮಲಗಿದ್ದರು ಮತ್ತು ಚೀರಾಟ ಕೇಳಿ ಬಂದು ನಂತರ ಚಾಸಾ.3 ರವರನ್ನು ಕರೆದುಕೊಂಡು ಬಂದರು. ತಮ್ಮ ಭಾವ ಚಾಸಾ.3 ರವರು ಬರುವುದಕ್ಕಿಂತ ಮುಂಚೆ ಊರಿನ ಸುಮಾರು 20 ರಿಂದ 30 ಜನ ಬಂದಿದ್ದರು ಎಂದು ನುಡಿದಿದ್ದಾರೆ.

13. ಪ್ರಾಸಾ.2 ರವರು ತಮ್ಮ ಸಾಕ್ಷ್ಯದಲ್ಲಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವ 6 ವರ್ಷಗಳ ಹಿಂದೆ ಚಾಸಾ.1 ರವರು ಊಟ ಮುಗಿಸಿ, ಹಸುಗಳನ್ನು ಕಟ್ಟಿ ಹಾಕುವ ಮನೆಗೆ ಹೋಗಿದ್ದಾಗ ಸುಮಾರು 12.00 ರಿಂದ 12.45 ಗಂಟೆ ಸಮಯದಲ್ಲಿ ಚಾಸಾ.3 ರವರು ತಮ್ಮನ್ನು ಎಬ್ಬಿಸಿ, ತಮ್ಮ ಮನೆಯ ಬಳಿ ಯಾರೋ ಕಿರುಚಿಕೊಳ್ಳುತ್ತಿದ್ದಾರೆಂದು ತಿಳಿಸಿದಾಗ, ಚಾಸಾ.3 ರವರೊಂದಿಗೆ ಹೋಗಿ ನೋಡಿದಾಗ ಚಾಸಾ,1 ರವರ ಕಾಲಿಗೆ ಬಿದ್ದು, ಪೆಟ್ಟು ಬಿದ್ದು, ಪೀಸಾಗಿದ್ದು, ಆಗ ಚಾಸಾ.1 ರವರನ್ನು ವಿಚಾರಿಸಿದಾಗ ಆರೋಪಿಯು ಸದರಿ ಹಲ್ಲೆ ನಡೆಸಿದ್ದಾಗಿ ತಿಳಿಸಿದ್ದು, ನಂತರ ತಾವು ಚಾಸಾ.3 ಮತ್ತು 4 ರವರ ಸಹಾಯದೊಂದಿಗೆ ಚಾಸಾ.1 ರವರಿಗೆ ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ನಂತರ 3 ತಿಂಗಳು ಬೆಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುವುದಾಗಿ ಮು.ಮಾ-1 ರಿಂದ 4 ಮತ್ತು ಆರೋಪಿಯನ್ನು ಗುರ್ತಿಸಿ ಸಾಕ್ಷ್ಯ ನುಡಿದಿರುತ್ತಾರೆ.

14. ಆರೋಪಿ ಪರ ವಕೀಲರು ಪ್ರಾಸಾ.2 ರವರನ್ನು ಪಾಟಿಸವಾಲು ಮಾಡಿದಾಗ ತಮ್ಮ ವಾಸದ ಮನೆಗೂ, ಹಸುಗಳನ್ನು ಕಟ್ಟಿ ಹಾಕುವ ಸ್ಥಳಕ್ಕೂ

ಸುಮಾರು 500 ಮೀಟರ್ ಅಂತರವಿದ್ದು, ತಮಗೂ ಮತ್ತು ಆರೋಪಿಗೂ ಸುಮಾರು 15 ವರ್ಷಗಳಿಂದ ಗಲಾಟೆಗಳು ಆಗುತ್ತಿದ್ದು, ಘಟನೆ ನಡೆಯುವ ಪೂರ್ವದಲ್ಲಿಯೂ 4-5 ಬಾರಿ ಗಲಾಟೆಯಾಗಿದ್ದು, ಈ ಸಂಬಂಧ ಯಾವುದೇ ದೂರು ನೀಡಿರುವುದಿಲ್ಲ. ಹಸುಗಳನ್ನು ಕಟ್ಟಿ ಹಾಕುವ ಮನೆಯಲ್ಲಿ ಯಾರೂ ವಾಸವಾಗಿರುವುದಿಲ್ಲ. ಚಾಸಾ.3 ರವರು ರಾತ್ರಿ ಸುಮಾರು 12.00 ಗಂಟೆಗೆ ಗಲಾಟೆ ವಿಚಾರ ತಿಳಿಸಿದರು ಮತ್ತು ಘಟನೆಯನ್ನು ತಾವು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಲೈಟ್ ಆಫ್ ಮಾಡಿದ್ದರಿಂದ ಕತ್ತಲಾಗಿತ್ತು. ತಮ್ಮ ಗಂಡ ತಾವು ವಾಸ ಮಾಡುವ ಮನೆಯಲ್ಲಿಯೂ ಸಹ ಮಲಗುತಿದ್ದರು. ಆದರೆ ಹಸು ಕರು ಹಾಕಿದ್ದರಿಂದ ಅಲ್ಲಿ ಮಲಗಿಕೊಳ್ಳುತ್ತಿದ್ದರು ಎಂದು ನುಡಿದಿರುತ್ತಾರೆ. ಗಲಾಟೆ ಆದ ಸಮಯದಲ್ಲಿ ಸುಮಾರು 10 ಜನ ಸೇರಿದ್ದರೆಂದು ನುಡಿದಿರುತ್ತಾರೆ.

15. ಫ್ರಾಸಾ.3 ರವರು ತಮ್ಮ ಸಾಕ್ಷ್ಯದಲ್ಲಿ ತಾವು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವ ಸುಮಾರು 5 ವರ್ಷಗಳ ಹಿಂದೆ ಚಾಸಾ.1 ರವರ ಮನೆಯ ಬಳಿ ನಿಪಿ.2 ಕ್ಕೆ ಸಹಿ ಮಾಡಿದ್ದು, ನಿಪಿ.2 ಕ್ಕೆ ಚಾಸಾ.4, ಚಾಸಾ.6 ಮತ್ತು ಚಾಸಾ.7 ರವರು ಸಹಿ ಮಾಡಿದ್ದು, ಸ್ಥಳದಲ್ಲಿ ಪೋಲೀಸರು ದೊಣ್ಣೆ ಮತ್ತು ಸೀರೆಯನ್ನು ಅಮಾನತುಪಡಿಸಿಕೊಂಡರೆಂದು, ಮುದ್ದೆಮಾಲು-1 ಮತ್ತು 2 ನ್ನು ಗುರ್ತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಫ್ರಾಸಾ.3 ರವರನ್ನು ಆರೋಪಿ ಪರ ವಕೀಲರು ಪಾಟಿಸವಾಲು ಮಾಡಿ, ಅವರ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ಫ್ರಾಸಾ.3 ರವರು ಪಾಟಿಸವಾಲಿನಲ್ಲಿ ಫ್ರಾಸಾ.1 ರವರಿಗೂ ಆರೋಪಿಗೂ ಮೊದಲಿನಿಂದಲೂ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ, ನಿಪಿ.2 ರಲ್ಲಿ ಬರೆದಿರುವ ಸಂಗತಿಗಳು ಗೊತ್ತಿಲ್ಲ. ಪೋಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿದ್ದೇನೆಂದು ನುಡಿದಿರುತ್ತಾರೆ.

16. ಪ್ರಾಸಾ.4 ರಿಂದ 6 ರವರು ಅಭಿಯೋಜನಾ ಪ್ರಕರಣದ ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನಾ ಪ್ರಕರಣವನ್ನು ಬೆಂಬಲಿಸಿ, ಸಾಕ್ಷ್ಯ ನುಡಿದಿರುವುದಿಲ್ಲ. ಪ್ರಾಸಾ.4 ಮತ್ತು 6 ರವರು ಅಭಿಯೋಜನಾ ಪ್ರಕರಣವನ್ನು ಬೆಂಬಲಿಸಿ ಸಾಕ್ಷ್ಯ ನುಡಿದಿರುವುದಿಲ್ಲ. ಇವರು ನಿಪಿ.2 ಸ್ಥಳ ಪಂಚನಾಮೆಗೆ ಪೋಲೀಸರ ಕೋರಿಕೆ ಮೇರೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು, ನಿಪಿ.2 ರಲ್ಲಿ ಬರೆದಿರುವ ಸಂಗತಿಗಳು ಗೊತ್ತಿಲ್ಲ ಮತ್ತು ತಮ್ಮ ಸಮಕ್ಷಮ ನಿಪಿ.2 ರ ಕಾಲಕ್ಕೆ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.4 ಮತ್ತು 6 ರವರನ್ನು ಪಾಟಿಸವಾಲು ಮಾಡಿದರೂ ಸಹ ಅಭಿಯೋಜನಾ ಪ್ರಕರಣಕ್ಕೆ ಅನುಕೂಲಕರವಾಗುವ ಯಾವುದೇ ಸಂಗತಿ ಹೊರಹೊಮ್ಮಿರುವುದಿಲ್ಲ. ಪ್ರಾಸಾ.5 ರವರು ತಮ್ಮ ಸಾಕ್ಷ್ಯದಲ್ಲಿ ನಿಪಿ.2 ಸ್ಥಳ ಪಂಚನಾಮೆಗೆ ಘಟನಾ ಸ್ಥಳದಲ್ಲಿ ಸಹಿ ಮಾಡಿರುವುದಾಗಿ ಸಾಕ್ಷ್ಯ ನುಡಿದಿದ್ದು, ಆದರೆ ನಿಪಿ.2 ರ ಕಾಲಕ್ಕೆ ತಾವು ಸ್ಥಳಕ್ಕೆ ಹೋಗುವಷ್ಟರಲ್ಲಿ ಪೊಲೀಸರು ಮಹಜರು ಬರೆದು ಮುಗಿಸಿದ್ದು, ತಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.5 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ, ಪಾಟೀಸವಾಲು ಮಾಡಿದರೂ ಸಹ ಮು.ಮಾ-1 ರಿಂದ 4 ನ್ನು ಪ್ರಾಸಾ.5 ರವರ ಸಮಕ್ಷಮ ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂಬುದನ್ನು ಒಪ್ಪಿರುವುದಿಲ್ಲ. ಹಾಗೆಯೇ ತಾವು ಸ್ಥಳಕ್ಕೆ ಹೋಗುವಷ್ಟರಲ್ಲಿ ನಿಪಿ.2 ಸ್ಥಳ ಪಂಚನಾಮೆಯನ್ನು ಬರೆಯಲಾಗಿತ್ತು ಎಂದು ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಪಾಟಿಸವಾಲು ಮಾಡಿದಾಗ

ನಿಪಿ.2 ರಲ್ಲಿ ಬರೆದಿರುವ ಸಂಗತಿಗಳು ಗೊತ್ತಿಲ್ಲ ಎಂದು ಸ್ಪಷ್ಟವಾಗಿ ನುಡಿದಿರುತ್ತಾರೆ. ಆದ್ದರಿಂದ ಅಭಿಯೋಜನಾ ಪ್ರಕಾರ ಫ್ರಾಸಾ.4 ರಿಂದ 6 ರವರ ಸಮಕ್ಷಮ ಮು.ಮಾ-1 ರಿಂದ 4 ನ್ನು ನಿಪಿ.2 ರ ಕಾಲಕ್ಕೆ ಅಮಾನತ್ತುಪಡಿಸಿಕೊಳ್ಳಲಾಗಿದೆ ಮತ್ತು ನಿಪಿ.2 ನ್ನು ಸ್ಥಳದಲ್ಲಿ ಬರೆಯಲಾಗಿದೆ ಎಂಬುದನ್ನು ನಂಬಲು ಸಾಕಷ್ಟು ಸಾಕ್ಷ್ಯ ಲಭ್ಯವಿರುವುದಿಲ್ಲವೆಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

17. ಫ್ರಾಸಾ.7 ರವರು ಅಭಿಯೋಜನಾ ಪ್ರಕರಣದ ತನಿಖಾಧಿಕಾರಿಗಳಾಗಿದ್ದು, ತಾವು ಆರೋಪಿ ವಿರುದ್ಧ ನಿಪಿ.1 ರಂತೆ ಪ್ರಥಮ ವರ್ತಮಾನ ಹೇಳಿಕೆ ಸ್ವೀಕರಿಸಿ, ನಿಪಿ.3 ರಂತೆ ಪ್ರಥಮ ವರ್ತಮಾನ ವರದಿ ತಯಾರಿಸಿ, ಸ್ಥಳಕ್ಕೆ ಭೇಟಿ ನೀಡಿ, ನಿಪಿ.2 ರಂತೆ ಸ್ಥಳ ಪಂಚನಾಮೆಯನುನ ಚಾಸಾ.3, 5 ರಿಂದ 7 ರವರ ಸಮಕ್ಷಮ ಜರುಗಿಸಿ, ನಿಪಿ.2 ರ ಕಾಲಕ್ಕೆ ಮು.ಮಾ-1 ರಿಂದ 4 ನ್ನು ಅಮಾನತ್ತುಪಡಿಸಿಕೊಂಡು ನಿಪಿ.4 ರಂತೆ ಸ್ವತ್ತಿನ ಪಟ್ಟಿ ತಯಾರಿಸಿ, ಕಡತಕ್ಕೆ ಅಳವಡಿಸಿಕೊಂಡು ನಂತರ ಚಾಸಾ.2 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡು ಆರೋಪಿಯನ್ನು ತಮ್ಮ ಮುಂದೆ ಹಾಜರುಪಡಿಸಿದ ಮೇರೆಗೆ ಅಗತ್ಯ ಕ್ರಮ ಜರುಗಿಸಿ, ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರಿದು, ಫ್ರಾಸಾ.1 ರವರ ಮರುಹೇಳಿಕೆಯನ್ನು ಪಡೆದುಕೊಂಡು, ಚಾಸಾ.1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ.5 ರಂತೆ ಪಡೆದು, ಕಡತಕ್ಕೆ ಅಳವಡಿಸಿಕೊಂಡು, ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಫ್ರಾಸಾ.7 ರವರ ತನಿಖಾ

ವೈಖರಿಯನ್ನು ಪಾಟಿಸವಾಲು ಮಾಡಿ, ಅಲ್ಲಗಳೆದಿರುತ್ತಾರೆ. ಫ್ರಾಸಾ.7 ತನಿಖಾಧಿಕಾರಿಗಳ ಸಾಕ್ಷ್ಯವು ಅಭಿಯೋಜನಾ ಪ್ರಕರಣವನ್ನು ಬೆಂಬಲಿಸಿದರೂ, ತನಿಖಾಧಿಕಾರಗಳ ಸಾಕ್ಷ್ಯವು ಕೇವಲ ತನಿಖೆಯ ಕ್ರಮಕ್ಕೆ ಸಂಬಂಧಿಸಿದ್ದು ಮಾತ್ರವಾಗಿದ್ದು, ಘಟನೆ ನಡೆದ ರೀತಿಯನ್ನು ದೃಢಪಡಿಸುವ ಸಾಕ್ಷ್ಯಕ್ಕೆ ಪರ್ಯಾಯವಾಗುವುದಿಲ್ಲ.

18. ಅಭಿಯೋಜನಾ ಪರವಾಗಿ ಸಾಕ್ಷ್ಯ ನುಡಿದಿರುವ ಫ್ರಾಸಾ.1 ರಿಂದ 3 ಮೌಖಿಕ ಸಾಕ್ಷ್ಯವನ್ನು ಮತ್ತು ದಾಖಲಾತಿ ಸಾಕ್ಷ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅಭಿಯೋಜನೆಯ ಪ್ರಕರಣದಲ್ಲಿ ಹಲವಾರು ವ್ಯತಿರಿಕ್ತತೆಗಳು, ಮುಂದುವರಿಕೆಗಳು, ಮತ್ತು ದೋಷಗಳು ಕಂಡುಬಂದಿರುತ್ತದೆ. ನಿಪಿ.1 ಪ್ರಥಮ ವರ್ತಮಾನ ಹೇಳಿಕೆ ಪ್ರಕಾರ ದಿನಾಂಕಃ 15.03.2016 ರ 00.30 ಗಂಟೆ ಸಮಯದಲ್ಲಿ ಫ್ರಾಸಾ.1 ರವರು ತಮ್ಮ ಮನೆಯ ಮುಂದೆ ಮಲಗಿದ್ದಾಗ ನಾಯಿ ಬೊಗಳುವ ಶಬ್ದ ಕೇಳಿಸಿಕೊಂಡಾಗ ಮೂರು ಜನ ಅಪರಿತ ವ್ಯಕ್ತಿಗಳು ಬಂದು ಕೈಗಳಲ್ಲಿದ್ದ ದೊಣ್ಣೆಗಳಿಂದ ಏಕಾಏಕಿ ತಮ್ಮ ಬಲಗಾಲಿಗೆ ಮತ್ತು ಎಡಮೊಣಕೈಗೆ ಹೊಡೆದು ತೀವ್ರತರವಾದ ರಕ್ತಗಾಯಗಳನ್ನುಂಟುಮಾಡಿದ್ದು, ತಮ್ಮ ಕಾಲು ಮುರಿದಿರುತ್ತದೆ ಎಂದು ಆರೋಪಿಯು ಸ್ವಲ್ಪ ಆಚೆ ನಿಂತಿದ್ದು, ಸಾಕು ಬನ್ನಿ ಎಂದು ಕೂಗಿದಾಗ ಅಪರಿಚಿತ ಮೂರು ಜನ ಓಡಿಹೋದಾಗ ಚಾಸಾ.2 ರಿಂದ 4 ರವರು ಬಂದು ತಮ್ಮನ್ನು ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದರು ಎಂಬುದಾಗಿರುತ್ತದೆ. ಆದರೆ ತನಿಖೆಯ ವೇಳೆ ಹಾಗೂ ಆರೋಪ ಪಟ್ಟಿಯಲ್ಲಿ ಕೇವಲ ಆರೋಪಿ ಒಬ್ಬರನ್ನೆ ಮಾತ್ರ ಆರೋಪಿ ಎಂದು ತೋರಿಸಲಾಗಿದ್ದು, ನಿಪಿ.3 ಪ್ರಥಮ ವರ್ತಮಾನ ವರದಿಯಲ್ಲಿ ಉಲ್ಲೇಖಿಸಲಾದ ಇತರ ಮೂರು ಜನ ಅಪರಿಚಿತ ವ್ಯಕ್ತಿಗಳ ವಿರುದ್ಧ ತನಿಖೆ

ನಡೆಸದೇ ಇರುವುದಕ್ಕೆ ಯಾವುದೇ ಸಮರ್ಪಕ ವಿವರಣೆ ನೀಡಲಾಗಿಲ್ಲ. ಇದರಿಂದ ತನಿಖೆಯ ಸಮಗ್ರತೆಯ ಬಗ್ಗೆ ಅನುಮಾನ ಮೂಡಿಸುತ್ತದೆ.

19. ಅಭಿಯೋಜನೆಯ ಸಂಪೂರ್ಣ ಪ್ರಕರಣವನ್ನು ಗಮನಿಸಿದಾಗ ಚಾಸಾ,1 ಏಕೈಕ ಪ್ರತ್ಯಕ್ಷ ಸಾಕ್ಷಿದಾರರಾಗಿರುತ್ತಾರೆ. ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಆರೋಪಿಯೊಂದಿಗೆ ಇನ್ನೂ ಮೂರು ಅಪರಿಚಿತ ವ್ಯಕ್ತಿಗಳು ದೊಣ್ಣೆಗಳಿಂದ ಹಲ್ಲೆ ನಡೆಸಿದರೆಂದು ಸಾಕ್ಷ್ಯ ನುಡಿದಿದ್ದಾರೆ. ಆದರೆ ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಆರೋಪಿ ಮತ್ತು ಅಪರಿಚಿತ ಮೂರು ಜನ ದೊಣ್ಣೆಯಿಂದ ಹೊಡದು ಮತ್ತು ಚಾಕುವಿನಿಂದ ತಮ್ಮ ಬಲಗಾಲಿಗೆ ಹೊಡೆದರು ಮತ್ತು ಆರೋಪಿ ಒಂದು ಕರಿಬೇವಿನ ಗಿಡದ ಕೆಳಗೆ ನಿಂತು ಸಾಕು ಬಿಡಿ ಎಂದು ಹೇಳಿದರೆಂದು ಸ್ಪಷ್ಟವಾಗಿ ಹೇಳಿರುತ್ತಾರೆ. ಆದರೆ ತನಿಖಾಧಿಕಾರಿಯವರ ಮುಂದೆ ನೀಡಿರುವ ಹೇಳಿಕೆಯಲ್ಲಿ ಆರೋಪಿ ಒಬ್ಬರೇ ದೊಣ್ಣೆಯಿಂದ ಮಾತ್ರ ಹಲ್ಲೆ ನಡೆಸಿದರೆಂದು ದಾಖಲಿಸಲಾಗಿದೆ. ಈ ಮರುಹೇಳಿಕೆಯ ಬಗ್ಗೆ ಫ್ರಾಸಾ.1 ರವರು ನ್ಯಾಯಾಲಯದ ಮುಂದೆ ಯಾವುದೇ ಸಾಕ್ಷ್ಯ ನೀಡಿಲ್ಲ. ಇದಲ್ಲದೇ ಚಾಸಾ.1 ರವರು ಚಾಕುವನ್ನು ಬಳಸಿ, ತಮಗೆ ಅಪರಿಚಿತರು ಹಲ್ಲೆ ನಡೆಸಿದ್ದರು ಎಂದು ಪಾಟಿಸವಾಲಿನಲ್ಲಿ ಹೇಳಿದ್ದರೂ ಸಹ ತನಿಖಾಧಿಕಾರಿಯವರು ಕೇವಲ ಮೂರು ದೊಣ್ಣೆಗಳನ್ನು ಮು.ಮಾ-1 ರಿಂದ 3 ರಂತೆ ವಶಪಡಿಸಿಕೊಂಡಿದ್ದು, ಚಾಕುವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಇದರಿಂದ ಘಟನೆಯ ನಿಖರ ಸ್ವರೂಪದ ಬಗ್ಗೆ ಅನುಮಾನ ಮೂಡುತ್ತದೆ. ಚಾಸಾ.1 ರವರ ಪತ್ನಿಯು ಅಭಿಯೋಜನಾ ಪ್ರಕರಣವನ್ನು ಬೆಂಬಲಿಸಿದರೂ ಸಹ ಅವರು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ ಸಾಕ್ಷಿದಾರರಾಗಿರುವುದಿಲ್ಲ. ಆದ್ದರಿಂದ ಅವರ ಸಾಕ್ಷ್ಯವು ಕೇಳಿದ ಮಾತಿನ

ಸಾಕ್ಷಿದಾರರಾಗಿರುತ್ತಾರೆ. ಜೊತೆಗೆ ಅವರ ಸಾಕ್ಷ್ಯದಲ್ಲಿ ಚಾಸಾ.1 ರವರ ಕಾಲು ಮುರಿದಿದ್ದು, ಚಾಸಾ.1 ರವರಿಗೆ ಹಲ್ಲೆ ನಡೆಸಿದರೆಂದು ಮುಂದುವರಿದು ಹೇಳಿರುವುದು ಕಂಡುಬರುತ್ತದೆ. ಈಗಾಗಿ ಅವರ ಸಾಕ್ಷ್ಯವನ್ನು ಪ್ರತ್ಯಕ್ಷ ಸಾಕ್ಷಿ ಎಂದು ಪರಿಗಣಿಸಲಾಗುವುದಿಲ್ಲ. ಆದ್ದರಿಂದ ಅವರ ಸಾಕ್ಷ್ಯವು ಅಭಿಯೋಜನೆಯು ಆರೋಪಿಯ ವಿರುದ್ಧ ಆರೋಪಿಸಿರುವ ಆರೋಪಗಳನ್ನು ನಂಬಲು ಸಾಕಷ್ಟು ಸಾಕ್ಷ್ಯ ಇರುವುದಿಲ್ಲವೆಂದು ಹಾಗೂ ಅವರ ಸಾಕ್ಷ್ಯದ ವಿಶ್ವಾಸಾರ್ಹತೆಯ ಬಗ್ಗೆ ನ್ಯಾಯಾಲಯಕ್ಕೆ ಅನುಮಾನ ಮೂಡಿಬರುತ್ತದೆ.

20. ಮತ್ತೊಬ್ಬರು ಸಾಕ್ಷಿದಾರಾದ ಫ್ರಾಸಾ.3 ರವರ ಚಾಸಾ.1 ರವರ ಭಾವಮೈದುನನಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಕೇವಲ ಸ್ಥಳ ಪಂಚನಾಮೆ ಬಗ್ಗೆ ಮಾತ್ರ ಬೆಂಬಲ ನೀಡಿ, ಸಾಕ್ಷ್ಯ ನುಡಿದಿದ್ದು, ಅವರು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ್ದ ಬಗ್ಗೆ ಸಾಕ್ಷ್ಯ ನುಡಿದಿರುವುದಿಲ್ಲ. ಫ್ರಾಸಾ.4 ರಿಂದ 6 ರವರು ಈಗಾಗಲೇ ಚರ್ಚಿಸಿದಂತೆ ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿ ಸಾಕ್ಷ್ಯ ನುಡಿದಿರುವುದಿಲ್ಲ. ಆದ್ದರಿಂದ ಅಭಿಯೋಜನಾ ಪ್ರಕರಣಕ್ಕೆ ಸ್ವತಂತ್ರ ಸಾಕ್ಷಿದಾರರ ಕೊರತೆ ಉಂಟಾಗಿರುತ್ತದೆ.

21. ಇನ್ನು, ಫ್ರಾಸಾ.1 ರವರಿಗೆ ಮುರಿತದ ಗಾಯಗಳಾಗಿವೆ ಎಂದು ಬಲಾಕಾಲು ಮತ್ತು ಬಲಗೈ ಮುರಿತದ ಗಾಯವಾಗಿರುತ್ತದೆ ಎಂದು ಅಭಿಯೋಜನೆಯವರು ಹೇಳಿದ್ದರೂ, ಫ್ರಾಸಾ.1 ರವರಿಗೆ ಚಿಕಿತ್ಸೆ ನೀಡಿದ ವೈದ್ಯರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಸಾಕ್ಷ್ಯ ನುಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದೆ. ನಿಪಿ.5 ಗಾಯದ ಪ್ರಮಾಣ ಪತ್ರದಲ್ಲಿರುವ ಸಂಗತಿಯನ್ನು ಚಾಸಾ.9 ರವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ,

ಸಾಕ್ಷ್ಯ ನುಡಿಸಿ, ಅದರ ಬಗ್ಗೆ ಆರೋಪಿಗೆ ಪ್ರಶ್ನಿಸಲು ಅವಕಾಶ ಮಾಡಿಕೊಟ್ಟಿರುವುದಿಲ್ಲ. ಆರೋಪ ಪಟ್ಟಿಯಲ್ಲಿ ಚಾಸಾ.8 ವೈದ್ಯರ ಹೆಸರನ್ನು ಉಲ್ಲೇಖಿಸಿದ್ದರೂ ಯಾವುದೇ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿಲ್ಲ. ಮತ್ತೊಬ್ಬ ವೈದ್ಯರಾದ ಚಾಸಾ.9 ರವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಅಪರಾಧ ಪ್ರಕರಣಗಳಲ್ಲಿ ಗಾಯಗಳ ಸ್ವರೂಪವನ್ನು ದೃಢಪಡಿಸಲು ವೈದ್ಯಕೀಯ ಸಾಕ್ಷ್ಯ ಮಹತ್ವದ್ದಾಗಿದ್ದು, ಅದರ ಕೊರತೆ ಅಭಿಯೋಜನಾ ಪ್ರಕರಣವನ್ನು ದುರ್ಬಲಗೊಳಿಸುತ್ತದೆ.

22. ತನಿಖಾಧಿಕಾರಿಯವರು ಸಾಕ್ಷಿಯಾಗಿ ವಿಚಾರಣೆಗೊಳಪಟ್ಟಿದ್ದರೂ, ಅವರ ಸಾಕ್ಷ್ಯದ ಆಧಾರದಲ್ಲಿ ಮಾತ್ರ ಆರೋಪಿಯನ್ನು ದೋಷಿ ಎಂದು ಘೋಷಿಸಲು ಸಮರ್ಥನೀಯವಲ್ಲ. ತನಿಖೆಯ ಸಂದರ್ಭದಲ್ಲಿ ಸಂಗ್ರಹಿಸಲಾದ ಸಾಕ್ಷ್ಯಗಳು ಮತ್ತು ನ್ಯಾಯಾಲಯದ ಮುಂದೆ ಬಂದಿರುವ ಸಾಕ್ಷಿಗಳ ಹೊಂದಾಣಿಕೆ ಇಲ್ಲದೆ ಇರುವುದು ಗಮನಾರ್ಹವಾಗಿದೆ. ಅಪರಾಧಿಕ ನ್ಯಾಯ ಶಾಸ್ತ್ರದ ಮೂಲ ಸಿದ್ಧಾಂತದ ಪ್ರಕಾರ ಆರೋಪಿಯನ್ನು ದೋಷಿ ಎಂದು ಘೋಷಿಸಲು ಅಭಿಯೋಜನೆಯು ತಮ್ಮ ಪ್ರಕರಣವನ್ನು ಸಮಂಜಸ ಅನುಮಾನಕ್ಕೆ ಅವಕಾಶವಿಲ್ಲದಂತೆ ಸಾಬೀತುಪಡಿಸಬೇಕು. ಆದರೆ, ಪ್ರಸ್ತುತ ಅಭಿಯೋಜನಾ ಪ್ರಕರಣದಲ್ಲಿ ಫ್ರಾಸಾ.1 ಮತ್ತು 2 ರವರ ಸಾಕ್ಷ್ಯದಲ್ಲಿ ವೈರುಧ್ಯತೆಗಳು, ವೈದ್ಯಕೀಯ ಸಾಕ್ಷ್ಯದ ಕೊರತೆ ಮತ್ತು ಸ್ಥಳ ಪಂಚನಾಮೆ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯ ನುಡಿದಿರುವುದು ಹಾಗೂ ತನಿಖೆಯ ದೋಷಗಳು ಒಟ್ಟಾರೆ ಅಭಿಯೋಜನಾ ಪ್ರಕರಣವನ್ನು ನಂಬಲು ಗಂಭೀರ ಸ್ವರೂಪದ ಅನುಮಾನವನ್ನುಂಟುಮಾಡುತ್ತದೆ. ಆದ್ದರಿಂದ, ನ್ಯಾಯಾಲಯದ ಅಭಿಪ್ರಾಯದಲ್ಲಿ ಅಭಿಯೋಜನೆಯು

ಆರೋಪಿಯ ವಿರುದ್ಧ ಮಾಡಿರುವ ಆರೋಪಗಳನ್ನು ಸಮಂಜಸ ಅನುಮಾನಕ್ಕೆ ಅವಕಾಶವಿಲ್ಲದಂತೆ ಸಾಬೀತುಪಡಿಸಲು ವಿಫಲವಾಗಿದೆ. ಹೀಗಾಗಿ, ಆರೋಪಿಗೆ ಅನುಮಾನದ ಲಾಭ ನೀಡುವುದು ನ್ಯಾಯಸಮ್ಮತವೆಂದು ಭಾವಿಸಿ, ಕಾನೂನು ಪ್ರಕಾರ ಇಂತಹ ಅನುಮಾನ ಇರುವ ಸಂದರ್ಭದಲ್ಲಿ ಆರೋಪಿಗೆ ಅನುಮಾನದ ಲಾಭ ನೀಡಬೇಕು. ಆದ್ದರಿಂದ ಅಭಿಯೋಜನೆಯ ಪ್ರಕರಣದಲ್ಲಿ ಉದ್ಭವಿಸಿದ ಅನುಮಾನದ ಪ್ರಯೋಜನವನ್ನು ಆರೋಪಿಗೆ ನೀಡಿ, ನ್ಯಾಯಾಲಯವು ಅಭಿಯೋಜನೆಯು ಆರೋಪಿ ವಿರುದ್ಧ ಮಾಡಿರುವ ಆರೋಪಗಳನ್ನು ನಿಸ್ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ ಎಂದು ತಿರ್ಮಾನಿಸಿ, ಅಂಶ-1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

23. <u>ಅಂಶ-4:</u> ಮೇಲ್ಕಂಡಂತೆ ಚರ್ಚಿಸಿ, ಬಂದ ನಿರ್ಣಯದಂತೆ ಈ ಕೆಳಕಂಡಂತೆ ಆದೇಶವನ್ನು ಈ ನ್ಯಾಯಾಲಯವು ಮಾಡಿರುತ್ತದೆ.

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ನ್ಯಾಯಾಲಯವು ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.324, 326 ಮತ್ತು 504 ರಡಿಯಲ್ಲಿ ಹೊರಿಸಲಾದ ಆರೋಪಗಳಿಂದ ಆರೋಪಿಯನ್ನು ನಿರ್ದೋಷಿ ಎಂದು ನಿರ್ಣಯಿಸಿ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನಿನ ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ. 437(ಎ)ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮು.ಮಾ-1 ರಿಂದ 4 ಯಾವುದೇ ಬೆಲೆ ಬಾಳದ ವಸ್ತುಗಳಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಶ್ರೀಘ್ರಲಿಪಿಗಾರರಿಗೆ ಗಣಕೀಕರಣದ ಮೂಲಕ ನೇರವಾಗಿ ಉಕ್ತಲೇಖನ ನೀಡಿ ತಿದ್ದುಪಡಿ ಮಾಡಿ, ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 30 ನೇ ಜುಲೈ, 2026 ರಂದು ಘೋಷಿಸಲಾಯಿತು)

SUKANYA C S Digitally signed by SUKANYA C S Date: 2026.08.04 16:46:46 +0530

(ಶ್ರಿಮತಿ. ಸುಕನ್ಯಾ ಸಿ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಶಿಡ್ಲಘಟ್ಟ

ಅನುಸೂಚಿ

1. ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ವಿವರಃ

ಪ್ರಾಸಾ-1	:	ಮುನಿರಾಜಪ್ಪ
ಪ್ರಾಸಾ-2	:	ಮುನಿಲಕ್ಷ್ಮಮ್ಮ
ಪ್ರಾಸಾ-3	:	ಪ್ರಕಾಶ್
ಪ್ರಾಸಾ-4	:	ಮುನಿರಾಜು
ಪ್ರಾಸಾ-5	:	ಆನಂದ್
ಪ್ರಾಸಾ-6	:	ಲೋಕೇಶ
ಪ್ರಾಸಾ-7	:	ಪ್ರದೀಪ್ ಪೂಜಾರಿ

2. ಅಭಿಯೋಜನೆ ಪರ ಗುರುತಿಸಲಾದ ದಾಖಲೆಗಳ ವಿವರಃ

ನಿಪಿ-1	:	ಪ್ರಥಮ ವರ್ತಮಾನ ಹೇಳಿಕೆ
ನಿಪಿ-2	:	ಕೃತ್ಯ ನಡೆದ ಸ್ಥಳದ ಮಹಜರು
ನಿಪಿ.3	:	ಪ್ರಥಮ ವರ್ತಮಾನ ವರದಿ
ನಿಪಿ.4	:	ಮಾಲುಪಟ್ಟಿ
ನಿಪಿ.5	:	ಗಾಯದ ಪ್ರಮಾಣ ಪತ್ರ

3. ಅಭಿಯೋಜನೆ ಪರ ಗುರುತಿಸಲಾದ ಮುದ್ದೆಮಾಲುಗಳ ವಿವರಃ

ಮುದ್ದೆಮಾಲು- 1 ರಿಂದ 3 - ಮೂರು ನೀಲಗಿರಿ ದೊಣ್ಣೆಗಳು

ಮು.ಮಾ-4 - ಒಂದು ಹರಿದ ಬಟ್ಟೆ

4. ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ವಿವರ:

ಯಾರೂ ಇಲ್ಲ

5. ಆರೋಪಿ ಪರ ಗುರುತಿಸಲಾದ ದಾಖಲೆಗಳ ವಿವರಃ

ನಿಡಿ-1 ರಿಂದ 4 : 4 ಛಾಯಚಿತ್ರಗಳು

SUKANYA C S Digitally signed by SUKANYA C S Date: 2026.08.04 16:46:54 +0530

(ಶ್ರೀಮತಿ. ಸುಕನ್ಯಾ ಸಿ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಶಿಡ್ಲಘಟ್ಟ.